ಉಪಯುಂಕ ವಾದ ಸಂಸ್ಥೆಯಾಗಿರುತ್ತದೆ. ಆದ್ದರಿಂದ ಹೆಚ್ಚಿಚ್ಚು ಬಸ್‌ಗಳನ್ನು ಒದಗಿಸಿ ಜನರಿಗೆ ಸೌಕರ್ಯವನ್ನು ಮಾಡಿಕೊಡಬೇಕು. ನೀವು ಈಗ ಏನು ಟಿಕೆಟ್ ದರಗಳನ್ನು ಹೆಚ್ಚು ಮಾಡಿರುತ್ತೀರಿ ಅದಕ್ಕೆ ಏನಾದರೂ ಸಮರ್ಥನೆ ಇರಬೇಕು. ಹೇಗೆಂದರೆ ಒಂದು ಮನೆಯ ಬಾಡಿಗೆಯನ್ನು ಹೆಚ್ಚಿಸಬೇಕಾದರೆ ಆ ಮನೆಗೆ ಒಂದು ಫ್ಯಾನೋ ಒಂದು ವಾಶ್ ಬೇಸಿನೋ ಹಾಕಿ ಹೆಚ್ಚಿನ ಸೌಕರ್ಯವನ್ನು ಕಲ್ಪಿಸಿ ಬಾಡಿಗೆಯನ್ನು ಹೆಚಿ ಸಬೇಕು. ಅದೇ ರೀತಿಯಲ್ಲಿ ನೀವು ಸೌಕರ್ಯಗಳನ್ನು ಕಲ್ಪಿಸಿಕೊಡಬೇಕೆಂದು ಹೇಳುತ್ತೇನೆ. ಪ್ರೈವೇಟ್‌ನವರಿಗೆ ಬಸ್‌ಗಳನ್ನು ಓಡಿಸಲು ಅವಕಾಶವನ್ನು ಕೊಟ್ಟರೆ ಅವರು ಕಡಿಮೆ ದುಡ್ಡಿನಲ್ಲಿ ಓಡಿಸುತ್ತಾರೆ. ಇದರಿಂದ ನಮ್ಮನ್ನೂ ಸಹ ಕೇಳುತ್ತಾರೆ ಏತಕ್ಕೆ ಕಡಿಮೆ ದುಡ್ಡಿನಲ್ಲಿ ಓಡಿಸುವುದಕ್ಕೆ ಸಾಧ್ಯವಾಗುವುದಿಲ್ಲವೆಂದು. ಈ ವಿಷಯು ಸರ್ಕಾರಕ್ಕೂ ತಿಳಿದಿರಬಹುದು.

ಮತ್ತೊಂದು ವಿಷಯವೆಂದರೆ ಕಾಲಕಾಲಕ್ಕೆ ಬಸ್‌ಗಳನ್ನು ಓಡಿಸದೆ ಇರುವುದು ಒಂದು ದೊಡ್ಡ ನ್ಯೂನತೆಯಾಗಿರುತ್ತದೆ. ಯಾವುದೇ ಡಿವಿಜನ್‌ನಲ್ಲಿ ಬಸ್‌ಗಳನ್ನು ಕಾಲಕಾಲಕ್ಕೆ ಓಡಿಸುವುದರಿಂದ ಬಹಳಷ್ಟು ಲಾಭವೂ ದೊರೆಯುತ್ತದೆ. ಲಕ್ಷಗಟ್ಟಲೆ ಆಗುತ್ತಿರುವ ನಷ್ಟವನ್ನು ತಪ್ಪಿಸಿ ಲಾಭವನ್ನು ಪಡೆಯಬಹುದು ಈ ರೀತಿ ತುಂಬಾ ನಷ್ಟ ಉಂಟಾಗಲು ದಕ್ಷ ಕಂಡಕ್ಟರ್‌ಗಳನ್ನು ಕೆಲಸಕ್ಕೆ ತೆಗೆದುಕೊಳ್ಳದಿರುವುದು ಕಾರಣವಾಗಿರುತ್ತದೆ. ಕಂಡಕ್ಟರ್‌ಗಳು ಮಾಡುತ್ತಿರುವ ಅಕ್ರಮಗಳನ್ನು ಹೇಳತೀರದಾಗಿರುತ್ತದೆ. ಇವರು ಪ್ರಯಾಣಿಕರಿಂದ ದುಡ್ಡನ್ನು ತೆಗೆದುಕೊಂಡು ಟಿಕೆಟನ್ನೇ ಕೊಡುವುದಿಲ್ಲ. ಏನು ತಿಳಿಯದ ಹಳ್ಳಿಯ ಜನರು ಟಿಕೆಟ್ಟನ್ನು ಕೇಳುವುದೇ ಇಲ್ಲ. ಅಲ್ಲದೆ ಬಸ್‌ಗಳಲ್ಲಿ ನಿಂತುಕೊಳ್ಳುವುದಕ್ಕೆ ಜಾಗವಿಲ್ಲದಷ್ಟು ಪ್ರಯಾಣಿಕರನ್ನು ತುಂಬುವುದಲ್ಲದೆ, ಟಾಪ್‌ನಲ್ಲೆಲ್ಲ ಪ್ರಯಾಣಿಕರನ್ನು ಕೂರಿಸಿಕೊಂಡು ಹೋಗುತ್ತಾರೆ. ಇಷ್ಟೆಲ್ಲ ಆದರೂ ಸರ್ಕಾರಿ ಅಂಥ ಬಸ್‌ಗಳಿಂದ ಉತ್ಪತ್ತಿಯೇ ಇಲ್ಲವೆಂದು ಹೇಳುತ್ತಾರೆ. ಆದ್ದರಿಂದ ಅದಕ್ಷ ಅಧಿಕಾರಿಗಳನ್ನು ತೆಗೆದು, ಅವರುಗಳನ್ನು ಆಫೀಸಿನಲ್ಲಿ ಯಾವುದಾದರೂ ಕೆಲಸಕ್ಕೆ ನಿಯಮಿಸಿಕೊಳ್ಳಬೇಕು. ಅಲ್ಲಲ್ಲಿ ಚೆಕಿಂಗ್ ಸ್ಕ್ವಾಡ್‌ಗಳನ್ನು ಇಟ್ಟು ತನಿಖೆ ನಡೆಸುವಂಥ ಕಾರ್ಯವಾಗಬೇಕು. ಅವರೂ ಕೂಡ ದಕ್ಷರಾಗಿ ಕೆಲಸ ಮಾಡಬೇಕು. ಈ ರೀತಿಯಾಗಿ ಒಂದು ಸಂಸ್ಥೆ ಎಲ್ಲ ಮಟ್ಟದಲ್ಲಿಯೂ ದಕ್ಷತೆಯಿಂದ ಕೆಲಸ ಮಾಡಿದರೆ ಆ ಸಂಸ್ಥೆಯು ಅಭಿವೃದ್ಧಿ ಹೊಂದುವುದಕ್ಕೆ ಸಾಧ್ಯವಾಗುತ್ತದೆ. ಇಷ್ಟು ಹೇಳಿ ಪ್ರೈವೇಟ್ ಬಾಡೀಸ್‌ಗೆ ಯಾವ ಕಾರಣದಿಂದಲೂ ಬಸ್‌ಗಳನ್ನು ಓಡಿಸುವುದಕ್ಕೆ ಅವಕಾಶವನ್ನು ಕೊಡಕೂಡದೆಂದು ಹೇಳಿ ನಮ್ಮ ಬೇಡಿಕೆಗಳನ್ನು ಏನು ಮಾನ್ಯ ಮಂತ್ರಿಗಳ ಮುಂದೆ ಇಟ್ಟಿದ್ದೇವೆ ಅದನ್ನು ಅದಷ್ಟು ಜಾಗ್ರತೆಯಾಗಿ ನೆರವೇರಿಸಿಕೊಡುತ್ತಾರೆಂದು ನಂಬಿ ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ

## Business of the House

SRI C. M. ARUMUGHAM.—Today we will rise at 6 O'clok. Let us not change the timings of today. The Hon. Minister could give reply tomorrow. I think the hon. Leader of the Opposition will agree with me. The timings of this House is from 1-00 to 6-00 p.m., if it is changed, it will not be convenient.

MR. CHAIRMAN.—Only to-day is allowed for debate on the demands for Transport and Tourism. We cannot postphone it for tomorrow. There are other three Demands relating to other departments which have to be discussed. In fact, in the Business Advisory Committee also has decided like that.

SRI C. M. ARUMUGHAM.—In this regard, the decision of the Business Advisory Committee is not correct. Kindly consider my suggestion that the Hon. Minister shall reply tomorrow.

SRI K. BHASKAR NAIDU. It is not possible to speak within the time allotted by the Business Advisory Committee. I do not know how the Leader of the Opposition has agreed to this. There are 225 hon. Members in this House, out of them hardly 20 or 25 hon. Members can only speak. The hon, Speaker has to think over thep ercentage of the speakers and has to allot the time.

MR. CHAIRMAN.—Tomorrow happens to be the non-official day and it is not possible to continue the debate tomorrow on these Demands. Now every hon. Member should speak for 5 minutes only.

SRI S. R. BOMMAI.—I do appreciate the views of hon. Members. At the same time hon. Members must also feel how to adjust in these circumstances. I think we will have some time on Monday. The rule is, so far as the demands are concerned, not less than 10 days should be fixed. Still there are three or four demands. We will discuss the matter on Monday. It is better to finish within the time. In our Hon. Chief Minister's portfolio itself there are 16 demands. It will become an injustice if sufficient time is not provided to us. Therefore, we will decide it on Monday.

SRI M. C. BASAPPA.—Sometimes, we will have to sit more time because of inevitable circumstances.

SRI C. M. ARUMUGHAM.—What is the decision about the timings.

MR. CHAIRMAN.—We have to sit little more time.

SRI K. BHASKAR NAIDU.—We have got our executive meeting.

SRI B. BHASKAR SHETTY.—Before 5 O'clock, the demands are to be over; after that upto 6 O'clock, the Hon. Minister would reply.

(MR. SPEAKER in the Chair)

SRI C. M. ARUMUGHAM.—I was submitting to this Hon. House that we can sit upto 6 O'clock; tomorrow the Hon Minister may reply. We have to follow certain Rules and procedures in this House. Tomorrow we can sit half-an-hour earlier. The Hon. Minister is capable of replying within half-an-hour and he will convince us within a short period of time.

MR. SPEAKER.—The Hon. Members have to extend their co-operation in this regard.

SRI R. GUNDU RAO.—All the hon. Members are very interested to speak on the demands of my Ministry and are interested to give much more constructive suggestions; I welcome all their suggestions So far 14 hon. Members have spoken ; 5 hon. Members are yet to speak; If I were to reply satisfactorily to all the hon. Members, I require atleast 1½ hours. I suggest that it is better to sit tomorrow at

8-30 A.M.

MR. SPEAKER.—We will assemble tomorrow at 9-00 A.M.

ಶ್ರೀ ಎಸ್. ಆರ್. ಬೊಮ್ಮಾಯಿ.—ಕಾರ್ಯಕ್ರಮದ ಪ್ರಕಾರ ನಾಳೆ ಇರುವ ಖಾಸಗಿ ನಿರ್ಣಯದ ಮೇಲೆ ಚರ್ಚೆಯನ್ನು ಬಿಡುವುದೂ ಬೇಡ. ಒಂದು ಘಂಟೆ ಮುಂಚಿತವಾಗಿ ಸೇರುವುದೂ ಬೇಡ. ಬೇಕಾದರೂ ಒಂದು ಗಂಟೆ ಹೆಚ್ಚಿಗೆ ಕೊಡೋಣ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ನಾಳೆ ಬೆಳಗ್ಗೆ ೯ ಘಂಟೆಗೆ ಸಭೆ ವ್ಯಾರಂಭವಾಗಿ ಮಧ್ಯಾಹ್ನ ಎರಡು ಘಂಟೆಯವರೆಗೂ ಕೂಡೋಣವೇ ?

ಅಧ್ಯಕ್ಷರು.—ನಾಳೆ ಬೆಳಗ್ಗೆ ೯ ಘಂಟೆಗೆ ಸಭೆ ಸೇರುವುದು. ನಂತರ ಪ್ರಶ್ನೋತ್ತರ ಗಮನ ಸೆಳೆಯುವ ಸೂಚನೆ, ಮತ್ತೆ ರೂಲ್ ೩೧೨ರ ಕೆಳಗೆ ಚರ್ಚೆ ಇವೆಲ್ಲಾ ಮುಗಿದ ಮೇಲೆ ಮಂತ್ರಿಗಳು ಉತ್ತರ ಕೊಡುತ್ತಾರೆ. ಇಷ್ಟೆಲ್ಲಾ ಆಗುವವರೆಗೆ ಒಂದು ಘಂಟೆಯಾಗಬಹುದು. ಇನ್ನೂ ಒಂದು ಘಂಟೆ ಹೆಚ್ಚಿಗೆ ಕುಳಿತುಕೊಳ್ಳೋಣ.

ಶ್ರೀ ಕೆ. ಎಸ್. ಕಾಳಮುರಿಗೌಡ.—ನಾಳೆ ಮಾನ್ಯ ಅರಣ್ಯ ಮಂತ್ರಿಗಳು ನಮ್ಮ ತಾಲ್ಲೂಕಿನಲ್ಲಿ ಪ್ರವಾಸ ಕೈಗೊಂಡಿದ್ದಾರೆ. ನಾಳೆ ನಾನು ಬೇಗ ಹೋಗಬೇಕು.

ಅಧ್ಯಕ್ಷರು.—ಸ್ವಲ್ಪ ತಡವಾಗಿ ಹೋಗಿ.

## Demands for Grants

### Demand Nos. 22 and 26 (Debate Contd.)

† SRI PRABHAKAR R. TELKAR (Chitapur).—Mr. Speaker, Sir, our Road Transport Corporation is one of the biggest Corporation in our State and it is said to be the fourth biggest Road Transport Corporation in India. The Corporation has been set up to provide adequate and efficient transport system in Karnataka. Since its inception this Corporation has tried its best to work efficiently. But, unfortunately for the last 3 to 4 years its efficiency has come down and it has not been working properly. The most important point which I would put before this August House is that lot of inadequacy of vehicles and inefficiency on the part of staff has caused heavy loss to this Corporation. In this connection I would suggest some measures by which to certain extent the Corporation could minimise its loss and also to stop pilferage that is going on in the Corporation. It is the common knowledge that due to non-issue of tickets by the conductors is the main cause for this loss which the K.S.R.T.C. has been incurring during all these years. I have seen in so many places this practice is being followed by the conductors. It is a strange thing that in Bombay-Karnataka area the practice of non-issue of tickets is very less. That is why we are getting good revenue from those areas. Now, it is high time that Government should think over this matter and find out why in certain areas the revenue is less and in some other area the revenue is more. We should ponder over this question as to the reason and all that. Therefore, the Govern-